# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **858** |
| **ವಿಧಾನ ಪರಿಷತ್ತಿನ ಸದಸ್ಯರ ಹೆಸರು** | : | **ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **13-03-2025** |
| **ಉತ್ತರಿಸುವ ಸಚಿವರು** | : | **ಮಾನ್ಯ ಗೃಹ ಸಚಿವರು** |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr>
<td>(ಅ)</td>
<td>2019 ರಿಂದ 2023 ರವರೆಗೆ ಬೆಂಗಳೂರು ನಗರದಲ್ಲಿ ಮತ್ತು ಇತರೆ ಪ್ರಮುಖ ಜಿಲ್ಲೆಗಳ ನಗರ ಪ್ರದೇಶದಲ್ಲಿ ಎಷ್ಟು High-Rise Buildings ಗಳಿವೆ; ಈ High-Rise Buildings ಗಳು NOC and CC ಪಡೆಯುವ ಸಮಯದಲ್ಲಿ ಅಗ್ನಿ ಸುರಕ್ಷತಾ ಮಾನದಂಡನೆಗಳಿಗೆ ಅನುಸರಣೆ ಖಚಿತಪಡಿಸಿಕೊಳ್ಳಲು ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಕಛೇರಿಯಿಂದಲೂ ಸಹ ಸಹಮತಿ ಪಡೆಯಬೇಕಾಗಿದ್ದು, ಬೆಂಗಳೂರಿನ ಎಷ್ಟು ಬಿಲ್ಡರ್/ಕಟ್ಟಡ ನಿರ್ಮಾಣ ಗುತ್ತಿಗೆದಾರರು ಸದರಿ ಕಚೇರಿಯಿಂದ ಸಹಮತಿ ಪಡೆದು ಕಟ್ಟಡ ನಿರ್ಮಾಣ ಮಾಡಿದ್ದಾರೆ; ಎಷ್ಟು ಬಿಲ್ಡರ್/ಕಟ್ಟಡ ನಿರ್ಮಾಣ ಕಂಪನಿಗಳು ಎನ್.ಓ.ಸಿ.ಯನ್ನು ಪಡೆಯದೇ ಓ.ಸಿ.ಯನ್ನು ಪಡೆದು ಕೊಂಡಿರುತ್ತಾರೆ. ಇದು ಕಾನೂನು ಬಾಹಿರವಲ್ಲವೇ;</td>
<td>ನಗರಾಭಿವೃದ್ಧಿ ಇಲಾಖೆಯ ಉತ್ತರ: ಜಂಟಿ ನಿರ್ದೇಶಕರು, ನಗರ ಯೋಜನೆ ಕೇಂದ್ರ ಕಚೇರಿಯಿಂದ ದಿನಾಂಕ: 01-04-2019 ರಿಂದ 31-03-2024 ರವರೆಗೆ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಮಂಜೂರಾತಿ ನೀಡಿರುವ ವಿವರ ಈ ಕೆಳಕಂಡಂತಿದೆ:-
<table>
<tr><th>Sl. No.</th><th>Year</th><th>Total No. of high rise buildings Sanctioned plans</th></tr>
<tr><td>1</td><td>2019-20</td><td>100</td></tr>
<tr><td>2</td><td>2020-21</td><td>87</td></tr>
<tr><td>3</td><td>2021-22</td><td>107</td></tr>
<tr><td>4</td><td>2022-23</td><td>114</td></tr>
<tr><td></td><td>Total</td><td>408</td></tr>
</table>
ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆ ಇಲಾಖೆಯಿಂದ ಕ್ಲಿಯರೆನ್ಸ್ ಪತ್ರ ಪಡೆದು ಸ್ವಾಧೀನಾನುಭವ ಪ್ರಮಾಣ ಪತ್ರ ನೀಡಿರುವ ವಿವರ ಈ ಕೆಳಕಂಡಂತಿದೆ:-
<table>
<tr><th>Sl. No.</th><th>Year</th><th>Total No. of high rise buildings Occupancy Certificate Issued</th></tr>
<tr><td>1</td><td>2019-20</td><td>172</td></tr>
<tr><td>2</td><td>2020-21</td><td>105</td></tr>
<tr><td>3</td><td>2021-22</td><td>112</td></tr>
<tr><td>4</td><td>2022-23</td><td>99</td></tr>
<tr><td></td><td>Total</td><td>488</td></tr>
</table>
ಸರ್ಕಾರದ ಅಧಿಸೂಚನೆ ಸಂಖ್ಯೆ: UUD 255 MNJ 2018, ದಿನಾಂಕ: 07-03-2019 ರಂತೆ ಹಾಗೂ ಕಟ್ಟಡ ಉಪನಿಧಿ 2003ರ ಕಲಂ 3.2 (10.4) ಕಟ್ಟಡದ ಎತ್ತರವು 15 ಮೀ ಮತ್ತು ಮೇಲ್ಪಟ್ಟ ಕಟ್ಟಡಗಳಿಗೆ ಕಡ್ಡಾಯವಾಗಿ ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು ಹಾಗೂ ಕಟ್ಟಡ ನಿರ್ಮಾಣದ ನಂತರ ಸ್ವಾಧಿನಾನುಭವ ಪ್ರಮಾಣ ಪತ್ರ ನೀಡುವ ಸಮಯದಲ್ಲಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ಕ್ಲಿಯರೆನ್ಸ್ ಪತ್ರವನ್ನು ಸಲ್ಲಿಸಿದ ನಂತರವೇ ಸ್ವಾಧಿನಾನುಭವನ</td>
</tr>
</table>

| | | |
|---|---|---|
| | | ಪ್ರಮಾಣ ಪತ್ರ ನೀಡಲು ಪಾಲಿಕೆಯಿಂದ ಕ್ರಮವಹಿಸಲಾಗುತ್ತಿದ್ದೆ. |
| (ಆ) | ಈ ಮಾನದಂಡನೆಗಳನ್ನು ಪಾಲಿಸದಿದ್ದಲ್ಲಿ, ಸದರಿ ಇಲಾಖೆಯಿಂದ ಬಿಲ್ಡರ್/ಕಟ್ಟಡ ನಿರ್ಮಾಣ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಲು ಕಾನೂನಿಲ್ಲಿ ಅವಕಾಶವಿದೆಯೇ; | ಅಗ್ನಿ ಸುರಕ್ಷತಾ ಮಾನ ದಂಡಗಳನ್ನು ಪಾಲಿಸದಿದ್ದ ಕಟ್ಟಡಗಳ ವಿರುದ್ಧ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 33 ಎಸ್‌ಎಫ್‌ಬಿ 2011, ದಿನಾಂಕ: 07-07-2011 ರನ್ವಯ ಕ್ರಮ ಕೈಗೊಳ್ಳಲು ಅವಕಾಶವಿರುತ್ತದೆ. |
| (ಇ) | ಇದ್ದಲ್ಲಿ, ಯಾವ ರೀತಿ ಕ್ರಮಕೈಗೊಳ್ಳಲಾಗುತ್ತಿದೆ ಮತ್ತು ಇಲ್ಲಿಯವರೆಗೆ ಇಂತಹ ಎಷ್ಟು ಪ್ರಕರಣಗಳು ದಾಖಲಾಗಿವೆ; | ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 33 ಎಸ್‌ಎಫ್‌ಬಿ 2011 ದಿನಾಂಕ: 07-07-2011 ರಲ್ಲಿ 15.00 ಮೀಟರ್ ಮೇಲ್ಪಟ್ಟ ಎತ್ತರದ ಕಟ್ಟಡಗಳನ್ನು ನಿರ್ಮಾಣ ಮಾಡುವ ಪೂರ್ವದಲ್ಲಿ ಅಗ್ನಿಶಾಮಕ ಇಲಾಖೆಯಿಂದ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರವನ್ನು ಹಾಗೂ ಕಟ್ಟಡದ ನಿರ್ಮಾಣದ ನಂತರ ಕ್ಲಿಯರೆನ್ಸ್ ಪತ್ರ ಪಡೆಯ ಬೇಕಾಗಿರುತ್ತದೆ. ತದನಂತರ ಸಂಬಂದಪಟ್ಟ ಕಟ್ಟಡದವರು ಕ್ಲಿಯರೆನ್ಸ್ ಪತ್ರವನ್ನು ಪ್ರತಿ 02 ವರ್ಷಗಳಿಗೊಮ್ಮೆ ನವೀಕರಣ ಮಾಡಿಸಿಕೊಳ್ಳಬೇಕಾಗಿರುತ್ತದೆ.<br><br>ಮುಂದುವರೆದು, ನಿರಾಕ್ಷೇಪಣಾ ಪತ್ರ ಪಡೆಯದೇ ಹಾಗೂ 02 ವರ್ಷಗಳಿಗೊಮ್ಮೆ ಕ್ಲಿಯರೆನ್ಸ್ ಪತ್ರವನ್ನು ನವೀಕರಣ ಮಾಡಿಸದೇ ಇದ್ದ ಪಕ್ಷದಲ್ಲಿ ರಾಜ್ಯದಲ್ಲಿ ನಿರ್ಮಿಸಲಾಗಿರುವ ಅನಧಿಕೃತ ಕಟ್ಟಡಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 33 ಎಸ್‌ಎಫ್‌ಬಿ 2011, ದಿನಾಂಕ: 07-07-2011ರ ಕ್ರಮ ಸಂಖ್ಯೆ: 7 ಮತ್ತು 8 ರಲ್ಲಿ ಈ ಕೆಳಕಂಡಂತೆ ವಿವರಿಸಲಾಗಿದೆ.<br><br>7. During such inspection, the Officer In-charge shall satisfy himself that there are no deviations/alterations affecting the fire safety measures. The failure to comply with the Fire Safety Measures prescribed by the concerned authorities, the occupier/developer/owner/builder be provided reasonable notice, which shall not be more than three months in any case, to ensure compliance. The occupier/developer/owner/builder shall rectify the lapses as pointed out in the notice and intimate the Officer in-charge regarding compliance within the period prescribed. Upon intimation from the occupier/developer/owner/builder of compliance the Officer in charge along with the residents/tenants representative shall once again inspect the building to ascertain whether such lapses have been rectified or not.<br><br>8. If occupier/ developer/owner/ builder has tailed to intimate that the lapses have been rectified during the period prescribed by the Fire |

| | | |
|---|---|---|
| | | Officer or, if upon such intimation and re-inspection, the Fire Officer concludes that the lapses have not been attended, the Fire Officer shall immediately intimate BESCOM, GESCOM, HESCOM, CHESCOM and other electric supply companies etc, to disconnect electricity connection and also seal the building to prevent fire hazards and save lives and property of general public. The Fire Officer shall also intimate the failure to rectify the lapses to BBMP and other Municipal authority. Upon such intimation. the BBMP and other Municipal authorities shall suspend the occupancy certificate for the High rise building.<br><br>ಈ ನ್ಯೂನ್ಯತೆಯನ್ನು ಸರಿಪಡಿಸಿಕೊಳ್ಳಲು 90 ದಿನಗಳ ಕಾಲಾವಕಾಶದೊಂದಿಗೆ ನೋಟಿಸ್ ಜಾರಿ ಮಾಡಲಾಗುತ್ತದೆ.<br><br>ನಿಗಧಿತ ಅವಧಿಯೊಳಗೆ ನ್ಯೂನ್ಯತೆಯನ್ನು ಸರಿಪಡಿಸಿಕೊಳ್ಳದ ಕಟ್ಟಡದ ಸ್ವಾಧೀನಾನುಭವ ಪತ್ರ ಹಿಂಪಡೆಯಲು ಮತ್ತು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳಿಗೆ ಪತ್ರ ಬರೆಯಲಾಗುವುದು.<br><br>ಕಾನೂನಿನ ಕ್ರಮ ಕೈಗೊಳ್ಳಲು ಈ ಇಲಾಖೆಯಿಂದ ಪ್ರಕಣಗಳು ದಾಖಲಾಗಿರುವುದಿಲ್ಲ. |
| **(ಈ)** | 2024 ರಿಂದ ಇಲ್ಲಿಯವರೆಗೆ ಸದರಿ ಬಿಲ್ಡರ್/ಕಟ್ಟಡ ನಿರ್ಮಾಣ ಗುತ್ತಿಗೆದಾರರಿಂದ ಎಷ್ಟು ಅರ್ಜಿಗಳು ಸ್ವೀಕೃತವಾಗಿ ಅಗ್ನಿ ಸುರಕ್ಷತಾ ಮಾನದಂಡನೆಗಳಿಗೆ ಅನುಸರಣೆ ಖಚಿತ ಪಡಿಸಿಕೊಳ್ಳಲು ಬಾಕಿ ಉಳಿದು ಕೊಂಡಿವೆ? | ನಿರಾಕ್ಷೇಪಣಾ ಪತ್ರ ಕೋರಿ 2024 ರಿಂದ ಇಲ್ಲಿಯವರೆಗೆ ಒಟ್ಟು 636 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಅಗ್ನಿ ಸುರಕ್ಷತಾ ಮಾನದಂಡನೆಗಳಿಗೆ ಅನುಸರಣೆ ಖಚಿತಪಡಿಸಿಕೊಳ್ಳಲು ಒಟ್ಟು 193 ಅರ್ಜಿಗಳು ಬಾಕಿ ಉಳಿದುಕೊಂಡಿರುತ್ತದೆ. |

**ಸಂಖ್ಯೆ: ಹೆಚ್‌ಡಿ 76 ಎಸ್‌ಎಫ್‌ಬಿ 2025**

**(ಡಾ. ಜಿ. ಪರಮೇಶ್ವರ)**
**ಗೃಹ ಸಚಿವರು**